**OS- 1/2013**
**PW-1**

ಇಂದು ದಿಃ**19-07-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಕೆ ವಕೀಲರಿಂದ ಪ್ರತಿವಾದಿ 19 ಮತ್ತು 20 ರವರ ಪರಃ**

ನಾವು ಈ ದಾವೆಯಲ್ಲಿ 19 ಮತ್ತು 20 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನನ್ನು ಪ್ರತ್ಯೇಕವಾಗಿ ಅವುಗಳ ವಿಸ್ತೀರ್ಣ ತೋರಿಸಿದ್ದೇವೋ ಅಥವಾ ಒಟ್ಟು ವಿಸ್ತೀರ್ಣ ತೋರಿಸಿದ್ದೇವೋ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಾವು 20 ನೆ ಪ್ರತಿವಾದಿ ತಲಾ 33 1/4 ಗುಂಟೆಯನ್ನು ನನ್ನ ಸಹೋದರರಾದ 3 ಮತ್ತು 10 ನೇ ಪ್ರತಿವಾದಿಯರಿಂದ ಅವರ ಜಿ ಪಿ ಎ ಹೋಲ್ಡರ್ ಶಿವಪ್ಪ ಇವರ ಮುಖಾಂತರ ಖರೀದಿ ಮಾಡಿದ್ದಾರೆಂದು ತಿಳಿಸಿದ್ದೇನೆಂದರೆ ಗೊತ್ತಿಲ್ಲ. 20 ನೇ ಪ್ರತಿವಾದಿ 2 ಎಕರೆ 19 1/2 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. 19 ನೇ ಪ್ರತಿವಾದಿ ಎಷ್ಟು ವಿಸ್ತೀರ್ಣದ ಜಮೀನನ್ನು ಖರೀದಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. 19 ನೇ ಪ್ರತಿವಾದಿ ಈ ಐಟಂ ನಂ 1 ಜಮೀನಿನಲ್ಲಿ ಒಟ್ಟು 2 ಎಕರೆ 8 ಕಾಲು ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. 19 ಮತ್ತು 20 ನೇ ಪ್ರತಿವಾದಿ ಖರೀದಿ ಮಾಡಿದ ಕ್ಷೇತ್ರ ಹೊರತು ಪಡಿಸಿ , ಆ ಸರ್ವೆ ನಂಬರ್ ನಲ್ಲಿ ಬೇರೆ ಯಾವುದೇ ಜಮೀನು ಉಳಿಯುವುದಿಲ್ಲ ಎಂದರೆ ಗೊತ್ತಿಲ್ಲ. ಅಸಲು ದಾವೆ ನಂಃ 14/2002 ಇದು ನನ್ನ ಅಣ್ಣ ಪರಶುರಾಮ ಮತ್ತು ನನ್ನ ತಾಯಿ ಮತ್ತು ಉಳಿದ ಸಹೋದರರ ನಡುವೆ ನಡೆದಿತ್ತು ಎಂದು ನಾನು ವಾದ ಪತ್ರದಲ್ಲಿ ತಿಳಿಸಿದ್ದೇನೆಂದರೆ ಸರಿಯಲ್ಲ. ನನಗೆ 2 ನೇ ಪ್ರತಿವಾದಿಯ ಸಹಿ ಗುರುತಿಸಲು ಆಗುವುದಿಲ್ಲ. ವಾದ ಪತ್ರದಲ್ಲಿ ಸದರಿ ದಾವೆಯ ಬಗ್ಗೆ ನಾನು

ಹೇಳಿದ್ದರೂ , ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಈವರೆಗೂ ನಾನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸದರಿ ದಾವೆಯಲ್ಲಿ ಆ ದಾವೆಯ ಎಲ್ಲಾ ಪಕ್ಷಗಾರರು ರಾಜಿಯಾಗಿ 2003 ರಲ್ಲಿ ರಾಜೀ ಡಿಕ್ರಿ ಆಗಿದ್ದು , ಈ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಸದರಿ ದಾವೆಯ ಬಗ್ಗೆ ನಮೂದಿಸಿದ್ದರೂ ಮತ್ತು ನನಗೆ ಆ ದಾವೆಯ ಬಗ್ಗೆ ಮಾಹಿತಿ ಇದ್ದರೂ ಈಗ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಗೆ ನಿಪಿ.4 ರಿಂದ 9 ನ್ನುತೋರಿಸಿ , ಸದರಿ ಕ್ರಯ ಪತ್ರಗಳು ನನ್ನ ತಾಯಿ ಮತ್ತು ನನ್ನ ಸಹೋದರರು 19 ಮತ್ತು 20 ನೇ ಪ್ರತಿವಾದಿಗೆ ಬರೆದು ಕೊಟ್ಟ ಕ್ರಯಪತ್ರಗಳು ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು ಹೇಳುತ್ತಾರೆ. ಸಾಕ್ಷಿ ಖರೀದಿ ಮಾಡಿಕೊಂಡಿದ್ದು ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಮೂಲ ಕ್ರಯಪತ್ರಗಳನ್ನು ತೋರಿಸಿ ಹೇಳಲು ಅವುಗಳು ಸುಳ್ಳು ಎಂದು ಹೇಳುತ್ತಾರೆ.

ಸಾಕ್ಷಿಗೆ 4 ನೇ ಪ್ರತಿವಾದಿ ಮಾಡಿಕೊಟ್ಟ 23-02-2008 ರ ಜಿ ಪಿ ಎ ಯ ಮೂಲ ಪ್ರತಿಯನ್ನು ತೋರಿಸಿ , ಕೇಳಲು ಅದರಲ್ಲಿರುವ ಪೋಟೋ 4 ನೇ ಪ್ರತಿವಾದಿಯ ಎಂದರೆ ಸರಿ . ಅದರಲ್ಲಿ 4 ನೇ ಪ್ರತಿವಾದಿಯ ಸಹಿ ಇದೆ ಎಂದರೆ ಸರಿ. ಸದರಿ ಜಿ ಪಿ ಎ ಯನ್ನು ನಿಡಿ 4 ಎಂದು ಗುರುತಿಸಲಾಯಿತು. ನಿಡಿ 4 ನ್ನು 4 ನೇ ಪ್ರತಿವಾದಿ ಬರೆದುಕೊಟ್ಟಿರುತ್ತಾಳೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಎರಡು ಜಿ ಪಿ ಎ ತೋರಿಸಿ, ಅವುಗಳನ್ನು 2 ಮತ್ತು 10 ನೇ ಪ್ರತಿವಾದಿ ಮಾಡಿಕೊಟ್ಟಿದ್ದು ಎಂದರೆ ಸಾಕ್ಷಿ ನನಗೆ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. 19 ಮತ್ತು 20 ನೇ ಪ್ರತಿವಾದಿ ಐಟಂ ನಂ.1 ಜಮೀನನ್ನು ಖರೀದಿ ಮಾಡುವ ಮೊದಲು ಡಿ ಸಿ ,

ದಾವಣಗೆರೆ ಇವರಿಗೆ ಖರೀದಿ ಮಾಡಲು ಪರವಾನಿಗೆ ಕೇಳಿ , ಅರ್ಜಿ ಸಲ್ಲಿಸಿದ್ದು ,ಡಿ ಸಿ ಇವರು ಒಂದು ಜಮೀನಿಗೆ ಖರೀದಿ ಮಾಡಲು ಪರವಾನಿಗೆಯ ಅವಶ್ಯಕತೆ ಇಲ್ಲ ಎಂದು ಹೇಳಿದ್ದು , ಈ ವಿಷಯಗಳನ್ನು ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ತಿಳಿಸಿದ್ದು , ನೀವು ಆ ದಾಖಲೆಗಳನ್ನು ತೆಗೆಸಿ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾಖಲೆಗಳನ್ನು ತೆಗೆಸಲು ನಮಗೆ ತೊಂದರೆ ಇರಲಿಲ್ಲ. ಈ ಎಲ್ಲಾ ದಾಖಲೆಗಳ ಬಗ್ಗೆ ನಮಗೆ ಮಾಹಿತಿ ಇದ್ದರೂ , ಈ ದಾವೆಯಲ್ಲಿ ನಮಗೆ ಅನಾನೂಕೂಲ ಆಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ಸದರಿ ದಾಖಲೆಗಳನ್ನು ತೆಗೆಸಿಲ್ಲ ಎಂದರೆ ಸಾಕ್ಷಿ ತೆಗೆಸಿದ್ದೇವೆ ಎಂದು ಹೇಳುತ್ತಾರೆ. ಆ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರು ಪಡಿಸಿದ್ದೇವೆ. ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 20 ನೇ ಪ್ರತಿವಾದಿ ಟ್ರೆಸ್ಟ್ ನವರು ಡಿ ಸಿ , ದಾವಣಗೆರೆ ಇವರ ಪೂರ್ವನುಮತಿಯನ್ನು 2 ಎಕರೆ 20 ಗುಂಟೆ ಖರೀದಿ ಮಾಡಲು ಪಡೆದಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ 20 ಗುಂಟೆ ಖರೀದಿ ಮಾಡಲು ಅನುಮತಿ ಕೊಟ್ಟಿದ್ದರೂ , 2 ಎಕರೆ 19 ಗುಂಟೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 19 ಮತ್ತು 20 ನೇ ಪ್ರತಿವಾದಿ ದಾವಾ ಜಮೀನನ್ನು ಖರೀದಿ ಮಾಡಿದ ವಿಷಯ , ನನ್ನ ತಾಯಿ ಮತ್ತು ಸಹೋದರರು ಮತ್ತು ಸಹೋದರನ ಹೆಂಡತಿ ತಮ್ಮ ಕಷ್ಟಗಳಿಗೆ ಈ ಜಮೀನನ್ನು ಮಾರಿರುವ ವಿಷಯ ಮತ್ತು ಖರೀದಿದಾರರು ಸ್ವತ್ತಿನ ಸ್ವಾಧೀನದಲ್ಲಿ ಇರುವ ವಿಷಯ ನನಗೆ ಗೊತ್ತಿದ್ದರೂ , ನನಗೆ ಏನೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಶಿವಪ್ಪ ಇವರು ತೀರಿಕೊಂಡಿದ್ದಾರೆ ಎಂದರೆ ಸರಿ . ಶಿವಪ್ಪ ಇವರು ಖರೀದಿ ಪತ್ರಗಳು ಆದ ಸುಮಾರು 7-8 ವರ್ಷಗಳ ನಂತರ ತೀರಿಕೊಂಡರು ಎಂದರೆ ಗೊತ್ತಿಲ್ಲ. ನನ್ನ ತಾಯಿ ಅಥವಾ 2 ರಿಂದ 10 ನೇ ಪ್ರತಿವಾದಿಯರು ಶಿವಪ್ಪ ಇವರು ಬದುಕಿದ್ದಾಗ , ಅವರಿಗೆ ನೋಟೀಸು ಕೊಡುವುದಾಗಲಿ ಅಥವಾ ಈ ಕ್ರಯ ಪತ್ರಗಳ ಕುರಿತು ಯಾವುದಾದರೂ ಕಾನೂನು ಕ್ರಮ ಕೈಗೊಂಡ ಬಗ್ಗೆ ನನಗೆ ಗೊತ್ತಿಲ್ಲ. 2008 ರಿಂದ ಶಿವಪ್ಪ ಜೀವಂತ ಇರುವವರೆಗೂ ಇವರೆನಾದರೂ , ತಾವು ಮಾಡಿಕೊಟ್ಟ ಅಧಿಕಾರ ಪತ್ರದ ಬಗ್ಗೆ ದಾವೆ ಹೂಡಿದ್ದರಾ ಅಥವಾ ನೋಟೀಸು ಕೊಟ್ಟಿದ್ದರಾ ಅಥವಾ ಬೇರೆ ಕಾನೂನು ಕ್ರಮ ಜರುಗಿಸಿದ್ದರಾ ಎಂದರೆ ಸಾಕ್ಷಿ ಎಲ್ಲಾ ಸುಳ್ಳು ಎಂದು ಹೇಳುತ್ತಾರೆ. ನನ್ನ ತಾಯಿ , ಮೃತ ಬಾಬು , 2 ರಿಂದ 10 ನೇ ಪ್ರತಿವಾದಿಯರಿಗೆ ಸಾಕಷ್ಟು ವ್ಯವಹಾರ ಜ್ಞಾನ ಇತ್ತು ಎಂದರೆ ಇರಬಹುದು.2008 ರಲ್ಲಿಯೇ 19 ಮತ್ತು 20 ನೇ ಪ್ರತಿವಾದಿಯರಿಗೆ ನನ್ನ ತಾಯಿ , ಸಹೋದರರು ಮತ್ತು ಸಹೋದರನ ಹೆಂಡತಿ ದಾವಾ ಜಮೀನನ್ನು ಮಾರಾಟ ಮಾಡಿದ ವಿಷಯ ಗೊತ್ತಿದ್ದರೂ , ನಾವು ಉದ್ದೇಶಪೂರ್ವಕವಾಗಿ 2013 ರ ವರೆಗೆ ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ವ್ಯಾಜ್ಯದ ಜಮೀನಿನಿಂದ 20 ನೇ ಪ್ರತಿವಾದಿಯ ಟ್ರಸ್ಟ್ ಕಛೇರಿ ಮತ್ತು ಮಠ ಸುಮಾರು 4 ಕಿ ಮಿ ಅಂತರದಲ್ಲಿದೆ. ಟ್ರಸ್ಟ್ ನ ಭಕ್ತಾಧಿಗಳಿಗೆ ಮತ್ತು ಟ್ರಸ್ಟ್ ನ ಕೆಲಸಕ್ಕೆ ಅನುಕೂಲ ಆಗಲಿ ಎಂದು ಈ ಜಮೀನಿನನ್ನು ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ. 19 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಗೊತ್ತಿಲ್ಲ. ಅವರು ಪಂಚಮಶಾಲಿ ಟ್ರಸ್ಟ್ ನ ರಾಜ್ಯಾಧ್ಯಕ್ಷರು ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರಗಳ ಆಧಾರದ ಮೇಲೆ 19 ಮತ್ತು 20 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಬದಲಾವಣೆಯಾಗಿವೆ ಎಂದರೆ ಗೊತ್ತಿಲ್ಲ. 19

ಮತ್ತು 20 ನೇ ಪ್ರತಿವಾದಿಯವರು ದಾವಾ ಜಮೀನಿನ ಪ್ರಮಾಣಿಕ ಖರೀದಿದಾರರು ಎಂದರೆ ಸರಿಯಲ್ಲ. ಶಿವಪ್ಪ ಇವರಿಗೆ ಅಧಿಕಾರ ಪತ್ರಗಳನ್ನು ಬರೆದುಕೊಡುವ ಸಮಯದಲ್ಲಿ ಮತ್ತು ಕ್ರಯ ಪತ್ರಗಳನ್ನು 19 ಮತ್ತು 20 ನೇ ಪ್ರತಿವಾದಿಯರಿಗೆ ಬರೆದುಕೊಡುವ ಸಮಯದಲ್ಲಿ ಈ ಐಟಂ ನಂ 1 ಜಮೀನು ನನ್ನ ತಾಯಿ ಮತ್ತು ಸಹೋದರರ ಮತ್ತು ಅತ್ತಿಗೆಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. 2008 ರಲ್ಲಿ ಈ ಕ್ರಯಪತ್ರಗಳು ಆಗುವ ಸಮಯದಲ್ಲಿ ಜಮೀನುಗಳು ಯಾರ ಹೆಸರಿಗೆ ಇದ್ದವು ಎಂದರೆ ಸಾಕ್ಷಿ ನನ್ನ ತಾಯಿಯ ಹೆಸರಿಗೆ ಇದ್ದವು ಎಂದು ಹೇಳುತ್ತಾರೆ. 19 ಮತ್ತು 20 ನೇ ಪ್ರತಿವಾದಿಯರು ಈ ಜಮೀನುಗಳ ಪ್ರಮಾಣಿಕ ಖರೀದಿದಾರರು ಇದ್ದು , ಅವುಗಳ ಸ್ವಾಧೀನದಲ್ಲಿ ಇರುವ ವಿಷಯ ನಮಗೆ 2008 ರಿಂದಲೇ ಗೊತ್ತಿದೆ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ರಲ್ಲಿ 19 ಮತ್ತು 20 ನೇ ಪ್ರತಿವಾದಿಯರ ಹೆಸರುಗಳು ಇವೆ ಎಂದರೆ ಸರಿ . ಈ ದಾಖಲೆಗಳನ್ನು ಯಾವಾಗ ಪಡೆದುಕೊಂಡಿರಿ ಎಂದರೆ ಸಾಕ್ಷಿ ಹೊಲ ತೆಗೆದುಕೊಂಡಾಗ ಪಡೆದುಕೊಂಡಿರುತ್ತೇವೆಂದು ಹೇಳುತ್ತಾರೆ. 19 ಮತ್ತು 20 ನೇ ಪ್ರತಿವಾದಿಯರು ಈ ದಾವಾ ಜಮೀನಿನ ಮಾಲೀಕರು ಎಂದರೆ ಸರಿಯಲ್ಲ. 2008 ರಿಂದ 2013 ಕ್ಕೆ ಹೋಲಿಸಿದರೆ ಮತ್ತು 2013 ರಿಂದ ಈ ಇಸವಿಯವರೆಗೆ ಹೋಲಿಸಿದರೆ ಆ ಪ್ರದೇಶದಲ್ಲಿರುವ ಜಮೀನಿನ ಬೆಲೆ ಹೆಚ್ಚಾಗಿದೆ ಎಂದರೆ ಸರಿ .

ಈ ದಾವೆಯಲ್ಲಿ 19 ಮತ್ತು 20 ನೇ ಪ್ರತಿವಾದಿಯರು ಹೊರತು ಪಡಿಸಿ , ಉಳಿದ ಪ್ರತಿವಾದಿಯರು ನಮ್ಮ ನಿಲುವನ್ನು ಸಮರ್ಥಿಸಿ ಪ್ರತಿವಾದ ಪತ್ರ ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ , ಸಹೋದರರು ಮತ್ತು ನನ್ನ ಅತ್ತಿಗೆ ಮತ್ತು

ಅಣ್ಣನ ಮಕ್ಕಳು ಈಗ ಆಸ್ತಿಯ ಬೆಲೆ ಹೆಚ್ಚಾಗಿರುವ ಕಾರಣ ತಾವು ದಾವೆ ಹಾಕಲು ಬರುವುದಿಲ್ಲ ಎಂದು ನಮ್ಮನ್ನು ಪ್ರಚೋದಿಸಿ ನಮ್ಮ ಮುಖಾಂತರ ಈ ದಾವೆ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 14/2002 ರ ರಾಜೀ ಡಿಕ್ರಿಯ ಪ್ರಕಾರ ಸದರಿ ದಾವೆಯ ಪಕ್ಷಗಾರರಿಗೆ ಅವರವರಿಗೆ ಬಂದಂತಹ ಹಿಸ್ಸೆಗಳನ್ನು ಅವರು 19 ಮತ್ತು 20 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ್ದು , ಈ ದಾವಾ ಜಮೀನಿನಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ. 14/2002 ರ ಡಿಕ್ರಿಯನ್ನು ನಾನಾಗಲೀ ಅಥವಾ ಉಳಿದ ವಾದಿಯವರ ಅಥವಾ ಪ್ರತಿವಾದಿಯವರಾಗಲಿ ಈ ವರೆಗೂ ಪ್ರಶ್ನಿಸಿಲ್ಲ ಎಂದರೆ ಸರಿ . 19 ಮತ್ತು 20 ನೇ ಪ್ರತಿವಾದಿಯವರು ಖರೀದಿ ಮಾಡಿದ ದಾವಾ ಜಮೀನಿನಲ್ಲಿ ನಮಗಾಗಲಿ ಅಥವಾ ಉಳಿದ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 19 ಮತ್ತು 20 ನೇ ಪ್ರತಿವಾದಿಯರು ಕ್ರಯಕ್ಕೆ ಪಡೆದ ವಿಷಯ ಗೊತ್ತಿದ್ದರೂ ಎಲ್ಲಾ ಸಂಗತಿಗಳನ್ನು ಮರೇಮಾಚಿ ಈ ದಾವೆಯನ್ನು ಮಾಡಿದ್ದೇವೆಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು ಯಾವುದೇ ಪರಿಹಾರ ಪಡೆಯಲು ಅರ್ಹ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.